**ದಿನಾಂಕ 06.02.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ 2 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಡಿ.ಜಿ. ವಕೀಲರಿಂದಃ**

1. ದಾವಾ ಐಟಂ ನಂ. 1 ಮತ್ತು 2 ರ ಜಮೀನು ಹಿರಿಯೂರು ವಾಣಿವಿಲಾಸ ಸಾಗರದ ಜಲಾಶಯದ ಅಚ್ಚುಕಟ್ಟಿಗೆ ಸೇರಿದೆ ಎಂದು ಹೇಳಿದ್ದು, ಅದಕ್ಕೆ ಏನಾದರೂ ದಾಖಲಾತಿ ನೋಡಿದ್ದೀರಾ ಎಂದರೆ ಸಾಕ್ಷಿಯು ದಾಖಲಾತಿಯನ್ನು ನೋಡಿಲ್ಲ, ನಮ್ಮ ಹೊಲದ ಪಕ್ಕದಲ್ಲಿಯೇ ಇರುವ ಕಾರಣ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳುಜಲಾಶಯದ ಅಚ್ಚುಕಟ್ಟಿಗೆ ಸೇರಿದ್ದೇ ಆದಲ್ಲಿ ಅಂತಹ ಜಮೀನನ್ನು ಬಾಗಾಯತು ಜಮೀನು ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಅದು ನೀರಾವರಿ ಜಮೀನು ಎಂದು ಬರೆಯುತ್ತಾರೆ. ಪಹಣಿಯಲ್ಲೂ ಆ ಬಗ್ಗೆ ಜಲಾಶಯ ಮೂಲ ಎಂದು ಬರೆಯುತ್ತಾರೆ ಎಂದರೆ ಸರಿ.

2. ಪಹಣಿಯಲ್ಲಿ ಕುಷ್ಕಿ ಜಮೀನು ಎಂದು ಇರುವುದು ಬಿಟ್ಟರೆ ಯಾವುದೇ ನೀರಾವರಿ ಜಮೀನು ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಮ್ಮ ಜಮೀನು ಸಹ ಕುಷ್ಕಿ ಎಂದೇ ಬರೆಯಲಾಗಿತ್ತು, ಈ ಹಿಂದೆ ಕುಷ್ಕಿ ಎಂದು ಬರೆಯಲಾಗುತ್ತಿತ್ತು, ಇತ್ತೀಚೆಗೆ ಜಲಾಶಯದ ಆಶ್ರಯ ಇದೆ ಎಂದು ನುಡಿಯುತ್ತಾರೆ. ಈಗಲೂ ಸಹ ಪಹಣಿಯಲ್ಲಿ ಕುಷ್ಕಿ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು 1.5 ಎಕರೆ ಜಮೀನಿನಿಂದ ನೀರಾವರಿ ಸೌಲಭ್ಯವನ್ನು ಮಾಡಿರುವ ಕಾರಣ ಅದನ್ನು ನೀರಾವರಿ ಜಮೀನು ಆಗಿರುತ್ತದೆ, ಆದರೆ ಪಹಣಿಯಲ್ಲಿ ಕುಷ್ಕಿ ಎಂದು ತೋರಿಸಲಾಗಿದೆ.

3. ಸದರಿ ಜಮೀನುಗಳು 30-40 ವರ್ಷಗಳಿಂದ ಬೀಳು ಬಿದ್ದಿದೆ ಎಂದರೆ ಸರಿಯಲ್ಲ. ಇಂದಿಗೂ ಸಹ ಅದರಲ್ಲಿ ಸೀಮೆ ಜಾಲಿ ಬೆಳೆದುಕೊಂಡಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಛಾಯಾ ಚಿತ್ರಗಳನ್ನು ತೋರಿಸಿದ್ದು, ಸದರಿ ಜಮೀನು ದಾವಾ ಐಟಂ ನಂ.2 ರ ಸ್ವತ್ತು ಆಗಿದ್ದು, ಅದರಲ್ಲಿ ಸೀಮೆ ಜಾಲಿ ಬೆಳೆದುಕೊಂಡಿದೆ ಎಂದರೆ ಸಾಕ್ಷಿಯು ಜಮೀನು ತಕರಾರು ಆದ ಕಾರಣ ಹಾಗೂ ಹೆಣ್ಣುಮಕ್ಕಳು ಬೆಳೆ ಬೆಳೆಯದ ಕಾರಣ ಅಂದಿನಿಂದಲೂ ಇದೆ ಎಂದು ನುಡಿಯುತ್ತಾರೆ. 30-40 ವರ್ಷದ ಸೀಮೆ ಜಾಲಿ ಎಂದು ಛಾಯಾ ಚಿತ್ರವನ್ನು ತೋರಿಸಿದ್ದು,

ಅದು 30-40 ವರ್ಷದ್ದಲ್ಲ, ಆಗಿದ್ದಲ್ಲಿ ಅವುಗಳು ಮರವಾಗುತ್ತಿದ್ದವು ಎಂದು ನುಡಿಯುತ್ತಾರೆ. ಸಾಕ್ಷಿ ಛಾಯಾ ಚಿತ್ರಗಳನ್ನು ಒಪ್ಪಿಕೊಂಡಿದ್ದು, ಅದಕ್ಕೆ ಸಿ.ಡಿ ಹಾಗೂ 65 ಬಿ ಸರ್ಟಿಫಿಕೇಟ್ ಕೊಡದೇ ಇರುವ ಕಾರಣ ಗುರುತಿಸಲು ನಿರಾಕರಿಸಲಾಗಿದೆ.

4. ಸದರಿ ಜಮೀನಿನಲ್ಲಿ ಕಬ್ಬನ್ನು ಬೆಳೆಯುತ್ತಿರಲಿಲ್ಲ ಎಂದರೆ ಸಾಕ್ಷಿಯು 20 ವರ್ಷದ ಹಿಂದೆ ಶುಗರ್ ಫ್ಯಾಕ್ಟರಿ ನಿಂತುಹೋಗಿದ್ದು, 3-4 ವರ್ಷಗಳ ಹಿಂದೆ ಜಮೀನು ತಕರಾರಿಗೆ ಬಿದ್ದು ಬೀಳು ಬಿದ್ದಿದೆ ಎಂದು ನುಡಿಯುತ್ತಾರೆ. ಅದರಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಬ್ಬು ಬೆಳೆಯಲು ಕರ್ಮಿಟ್ ಕೊಡುತ್ತಾರೆ ಎಂದರೆ ಸರಿ, ಆದರೆ ಸಾಕ್ಷಿಯು ಫ್ಯಾಕ್ಟರಿ ಮುಚ್ಚಿಹೋಗಿ 20 ವರ್ಷಗಳಾದ ಕಾರಣ ಈಗ ಇದೆಯಾ ಇಲ್ಲವಾ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಫ್ಯಾಕ್ಟರಿ ಮುಚ್ಚಿರುವ ಕಾರಣ ಈಗ ಪರ್ಮಿಟ್ ನ್ನು ನೋಡಿರುವುದಿಲ್ಲ. ಸದರಿ ಜಮೀನಿನಲ್ಲಿ ಎಂದಿಗೂ ಕಬ್ಬು ಬೆಳೆಯದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯ ತಂದೆ ಮೈಸೂರಿನಲ್ಲಿ Automatic XL Manufacturing Industry ಯಲ್ಲಿ Production Engineer ಆಗಿದ್ದರು ಎಂದರೆ ಸರಿ. 1997-2009 ರವರೆಗೂ ಅಲ್ಲಿಯೇ ಕೆಲಸ ಮಾಡಿಕೊಂಡು ಇದ್ದರು ಎಂದರೆ ಸರಿ. ಅದಾದನಂತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ Sri Devi Polytechnic College Tumakuru ಅಲ್ಲಿ Lecturer ಆಗಿ 2012-2017 ರವರೆಗೂ ಕೆಲಸ ಮಾಡಿರುತ್ತಾರೆ ಎಂದರೆ ಸರಿ. ಅವರಿಗೆ ಸುಮಾರು 60-70 ಸಾವಿರ ರೂಪಾಯಿಗಳ ಸಂಬಳ ಬರುತ್ತಿತ್ತು ಎಂದರೆ ಸರಿ. ಸದರಿ ಹಣದಿಂದ ದಾವಾ ಐಟಂ ನಂ.3 ಮತ್ತು 4 ನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಅವರಿಗೆ ಬರುವ ಸಂಬಳದಲ್ಲಿ ಮನೆಯ ಖರ್ಚಿಗೆ ಸಾಕಾಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಜಮೀನಿನ ಆದಾಯದಿಂದಲೇ ಅವರು ಖರೀದಿ ಮಾಡಿರಬಹುದು ಎಂದು ನುಡಿಯುತ್ತಾರೆ.

6. ಯಾವ ಸಾಲಿನಲ್ಲಿ ದಾವಾ ಐಟಂ ನಂ.3 ನ್ನು ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದರ ಚಕ್ಕು ಬಂದಿ ನನಗೆ ಗೊತ್ತಿಲ್ಲ. ಸದರಿಯವರು ದಾವಾ ಐಟಂ ನಂ.3 ರ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಖರೀದಿ ಮಾಡಿರುವ

ವಿಚಾರ ನನಗೆ ತಿಳಿದಿದೆ, ಅವರು ನನಗೆ ಅಳಿಯನಾಗಬೇಕು, ನಾನು ಆ ಸಮಯದಲ್ಲಿ ಅವರ ಜೊತೆ ಹೋಗಿರುವುದಿಲ್ಲ. ಶಿರಾ ದಲ್ಲಿ ತೆಗೆದುಕೊಂಡಿರುವ ಮನೆಯ ಚಕ್ಕು ಬಂದಿ ಸಹ ಗೊತ್ತಿಲ್ಲ ಎಂದರೆ ಸರಿಯಲ್ಲ. 2018 ರಲ್ಲಿ ಅವರಿಗೆ ಕಿಡ್ನಿ ತೊಂದರೆಯಾಗಿತ್ತು. ಅವರು ಕಿಡ್ನಿ ಸಮಸ್ಯೆ ಬಂದಾಗ ವೈಧ್ಯರು ಕಿಡ್ನಿ ಹಾಕಿಸಿಕೊಳ್ಳಲು ಅವರ ಹೆಂಡತಿ ಮತ್ತು ಮಕ್ಕಳನ್ನು ಕೇಳಿದ್ದು ವೈಧ್ಯರೂ ಸಹ ಕಿಡ್ನಿ ಹಾಕಿಸಬೇಕು ಎಂದು ಹೇಳಿದ್ದರು ಎಂದರೆ ಸರಿ, ಸಾಕ್ಷಿಯು ವಾದಿಯ ತಂದೆ ಆಗಲೇ ವೀಕ್ ಆಗಿದ್ದು, ಆತನಿಗೆ ಕಿಡ್ನಿ ಕೊಟ್ಟಿದ್ದಲ್ಲಿ ಅವನಿಗೆ ಏನಾದರೂ ಹೆಚ್ಚುಕಮ್ಮಿಯಾಗಿದ್ದರೆ, ಹೆಣ್ಣುಮಕ್ಕಳಿಗೆ ತೊಂ‌ದರೆಯಾಗುತ್ತಿರಲಿಲ್ಲವಾ ಎಂದು ನುಡಿಯುತ್ತಾರೆ.

**7.** 2018 ರಲ್ಲಿ ವಾದಿಯ ತಂದೆ ದೃಢವಾಗಿ ಹಾಗೂ ಮಾನಸಿಕವಾಗಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ವಾದಿಯ ತಂದೆ ಯಾವಾಗ ತೀರಿಕೊಂಡಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ದಿನಾಂಕ 17.05.2021 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ಯಾರೂ ಅವರಿಗೆ ಕಿಡ್ನಿಕೊಡದೇ ಇರುವ ಕಾರಣ ಅವರ ಹೆಂಡತಿ ಮಕ್ಕಳು ಕಡೆಗಣಿಸಿದ್ದಾರೆ ಎಂದರೆ ಸರಿಯಲ್ಲ. ಹೆಂಡತಿ ಮಕ್ಕಳೇ ಅವರನ್ನು ನೋಡಿಕೊಂಡಿದ್ದು, ಅವರು ಹೆಂಡತಿ ಮಕ್ಕಳ ಜೊತೆ ಇರುವಾಗಲೇ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವರ ಹೆಂಡತಿ ಮಕ್ಕಳು ನೋಡಿಕೊಳ್ಳದೇ ಇರುವ ಕಾರಣ ಅವರು ಅಣ್ಣನ ಜೊತೆ ಹೋಗಿ ಸೇರಿಕೊಂಡರು ಎಂದರೆ ಸಾಕ್ಷಿಯು ಮೊದಲು ಅಣ್ಣನ ಮನೆಗೆ ಓಡಾಡುತ್ತಿದ್ದರು, ತದನಂತರ ಆರೋಗ್ಯ ಹದಗೆಟ್ಟ ನಂತರ ಹೆಂಡತಿ ಮಕ್ಕಳನ್ನು ಅವರು ಸೇರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

**8.** ಅವರು ತೀರಿಕೊಳ್ಳುವವರೆಗೂ 2 ನೇ ಪ್ರತಿವಾದಿಯೇ ವಾದಿಯ ತಂದೆಯನ್ನು ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮೊದಲು ಆತ ತೋರಿಸಿದ್ದಾನೆ, ತದನಂತರ ಅವರ ಹೆಂಡತಿ ಮಕ್ಕಳೇ ಅವರನ್ನು ನೋಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯೇ ವಾದಿಯ ತಂದೆಯ ಪಾಲನೆ ಪೋಷಣೆ ಮಾಡಿದ ಕಾರಣ ಅವರಿಗೆ ಖರ್ಚು ವೆಚ್ಚಗಳು ಹೆಚ್ಚಾಗಿ ಸಾಲವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ, ಅವರು ಯಾವಾಗಾದರೂ ಒಂದು ಬಾರಿ ತೋರಿಸಿರಬಹುದು, ಉಳಿದದೆಲ್ಲಾ ವಾದಿ ಮತ್ತು ಅವರ

ತಾಯಿಯೇ ನೋಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಬಳಿ ಎಲ್ಲಾ ಬಿಲ್ಲುಗಳು ಇವೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ. 1 ಮತ್ತು 2 ನೇ ಪ್ರತಿವಾದಿಯ ದೊಡ್ಡ ಅಣ್ಣನಾದ ಚಿದಾನಂದಮೂರ್ತಿಯವರ ಬಳಿ ಹೋಗಿ ಸಾಲ ಜಾಸ್ತಿಯಾದ ಕಾರಣ ದಾವಾ ಐಟಂ ನಂ.1 ಮತ್ತು 2 ನ್ನು ಮಾರಾಟ ಮಾಡಲು ನಿರ್ಧರಿಸಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಚಿದಾನಂದಮೂರ್ತಿಯವರು ದಾವಾ ಐಟಂ ನಂ.1 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿಸಿದ್ದಾರೆ ಎಂದರೆ ಸರಿಯಲ್ಲ, ಆತ ಬುದ್ದಿವಂತನಾಗಿದ್ದರೆ ಅಣ್ಣ ತಮ್ಮಂದಿರನ್ನು ಒಂದು ಮಾಡುತ್ತಿದ್ದನು ಎಂದು ನುಡಿಯುತ್ತಾರೆ. ಅದೇ ದಿನ 5.25 ಲಕ್ಷ ರೂಪಾಯಿ ದುಡ್ಡನ್ನು ವಾದಿಯ ತಂದೆಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**9.** ವಾದಿಯ ತಂದೆಯು ಅವರ ಸ್ವಯಾರ್ಜಿತ ಆಸ್ತಿಯನ್ನು ತನ್ನ ಸೇವೆ ಮಾಡಿದ ಕಾರಣ 2 ನೇ ಪ್ರತಿವಾದಿಗೆ ವಿಲ್ ನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಆತ ಓಡಾಡಿಕೊಂಡಿದ್ದ ಸಮಯದಲ್ಲಿ ಬರೆದುಕೊಟ್ಟಿದ್ದನು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಒಂದು ಎಕರೆ ಜಮೀನನ್ನು ಬಿಟ್ಟರೆ ಉಳಿದ ಎಲ್ಲಾ ಜಮೀನು ಮತ್ತು ಮನೆಗಳನ್ನು ಅವರ ಅಣ್ಣನಿಗೆ ಬರೆದುಕೊಟ್ಟಿದ್ದಾರೆ, ಹೆಂಡತಿ ಮಕ್ಕಳಿಗೆ ಏನೂ ಉಳಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ನ್ನು ವಾದಿಯ ತಂದೆ 2 ನೇ ಪ್ರತಿವಾದಿಗೆ ದಾನಪತ್ರ ಮಾಡಿದ್ದು, ಖಾಯಿಲೆ ಜಾಸ್ತಿಯಾದ ಕಾರಣ ವಾದಿಯ ತಂದೆಯ ಕಡೆಯಿಂದಲೇ ಸದರಿ ಆಸ್ತಿಯನ್ನು ಮಾರಾಟ ಮಾಡಿಸಿ ಹಣವನ್ನು ಆಸ್ಪತ್ರೆಯ ಖರ್ಚಿಗೆ ಬಳಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯ ತಂದೆ ಮಾರಬಹುದಿದ್ದಲ್ಲಿ ನೇರವಾಗಿ ಮಾರಬಹುದಿತ್ತು, ದಾನಪತ್ರ ಬರೆದು ಮಾರುವಂತಹದ್ದು ಇರಲಿಲ್ಲ ಎಂದು ನುಡಿಯುತ್ತಾರೆ

**10.** ವಾದಿಯ ತಂದೆಗೆ ರೋಗ ಉಲ್ಬಣವಾದ ಕಾರಣ ದಾನ ಕೊಟ್ಟಿರುವ ಆಸ್ತಿ ಬೇಡ ಅವನ ಖರ್ಚಿಗೆ ಆಗಲಿ ಎಂದು 2 ನೇ ಪ್ರತಿವಾದಿ ವಾದಿಯ ತಂದೆಯ ಮುಖಾಂತರವೇ ಸದರಿ ಜಮೀನನ್ನು ಮಾರಾಟ ಮಾಡಿ ಆಸ್ಪತ್ರೆಯ ಖರ್ಚಿಗೆ ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ವಾದಿಯ ತಂದೆಯೇ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪಿಟ್ಲಾಲಿಯಲ್ಲಿ ವಾದಿಯ ತಂದೆಗೆ ಯಾವುದೇ ಮನೆ ಇಲ್ಲ ಎಂದರೆ

ಸಾಕ್ಷಿಯು ಒಂದು ಮನೆ ಇತ್ತು, ಅದು ನಮ್ಮ ಮನೆಯ ಪಕ್ಕನೇ ಇದ್ದು, ಅದು ನಮ್ಮ ಜಾಗದಲ್ಲಿ ಇದ್ದು, ಅವರು ಹುಷಾರು ತಪ್ಪಿದ ಕಾರಣ ಅದನ್ನು ಬಿಟ್ಟು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಪಿಟ್ಲಾಲಿಯಲ್ಲಿ ಮನೆಯನ್ನು ಬಿಟ್ಟುಕೊಟ್ಟಿರುವ ಬಗ್ಗೆ ನೀವು ದುಡ್ಡು ಪಡೆದಿದ್ದೀರಾ ಎಂದರೆ ಸಾಕ್ಷಿಯು ಅವರು ನೆಂಟರಾದ ಕಾರಣ ನಾನು ದುಡ್ಡು ಪಡೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಮನೆ ಇರಲಿಲ್ಲ ಎಂದರೆ ಸರಿಯಲ್ಲ.

**11.** ನನಾಗೂ 2 ನೇ ಪ್ರತಿವಾದಿಗೂ ಬಹಳ ದ್ವೇಶ ಇತ್ತು ಎಂದರೆ ಸರಿಯಲ್ಲ. ನನ್ನ ಮಾವ ತುಕಾರಾಮ ರ ಮಗಳಾದ ವಿಜಯಮ್ಮನನ್ನು ಮದುವೆಯಾಗಿದ್ದೇನೆ ಎಂದರೆ ಸರಿ. ತುಕಾರಾಮ ರ 2 ನೇ ಮಗಳನ್ನು ನಾನು ಒತ್ತುಕೊಂಡು ಹೋಗಿ ಮದುವೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ, ಅವರೆಲ್ಲರೂ ಒಪ್ಪಿ ಮದುವೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಮದುವೆಯಾದ ಕಾರಣ ನನಗೂ 1 ಮತ್ತು 2 ಪ್ರತಿವಾದಿಗಳಿಗೂ ಹಾಗೂ ಅವರ ಸಹೋದರರು ನನ್ನ ವಿರುದ್ಧ ಗಲಾಟೆ ಮಾಡಿದ ಕಾರಣ ಅವರ ವಿರುದ್ಧ ದ್ವೇಶ ಇದೆ ಎಂದರೆ ಸರಿಯಲ್ಲ. ಅದೇ ದ್ವೇಶಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**